in their compounds and grow forests or let them go to the Forest Department to seek jobs'. He does not know the growth of forests, perhaps. In Mysore State, for the last fifty years, the Mysore Government not only sent its own college students to places like Dehra Dun and even Oxford for higher studies, but also introduced their own Forest School from which a number of young men were trained up as Forest Rangers for the Forest Department. Today I hear that the Forest School has been closed. I am afraid Sri Anantaraman is not aware of this past history in the State. If the Government finds the need for more Foresters and Rangers, tomorrow the Government will, of its own accord, think of starting a Forest School and run for five or ten years as the case may be.

Sri R. ANANTARAMAN.—I am suggesting that it must be made an optional subject in the University.

Sri V. M. MASCARENHAS.—That is exactly the reason, Sir, why I am opposing this. No useful purpose would be served in introducing forestry in colleges or schools, because the course of forestry as I understand is a very intensive one. Forestry, sylviculture, engineering and so many varieties of subjects are required to be studied to make a forest man a first-class man. Is it humanly possible for any university which does not specialise in forestry, to introduce a course in forestry? My friend perhaps thinks it is easy, as easy as studying botany or zoology for two years from a few text-books. That does not make a forest man. A forest man, for more than 50 per cent of the days, actually goes into the forests, actually does forest work. Is it possible for the colleges to provide for such a kind of intensive training? As I said before, there is some confusion in the mind of my Hon'ble friend and I cannot but help opposing this cut motion.

***Sri A. G. RAMACHANDRA RAO** (Minister for Law and Education).—Sir, the House has heard with great attention and interest both the Hon'ble Members. Forests are of national importance. Mostly, in India at any rate, it is under the Government or a few village panchayets. There are no private forests in India at any rate which we find in Germany; and it may be that there is scope for local private institutions. Because here the entire forest is in the hands of the Government, the education that is necessary has also been taken up by the Government whenever it is found necessary as the Hon'ble Member Sri V. M. Mascarenhas has put it. It is therefore the main reason why they are running the forestry classes and forestry colleges for advanced training and we send our men to go abroad either to Germany or Oxford to take higher training whenever it is needed. Subjects like agriculture and horticulture are also taught and there is private employment also for which provision has been made in every school or college. But the Hon'ble Member Sri Anantaraman wants it to be introduced as any other subject in the University classes. How far it is feasible, I do not know. But yet I am referring the subject to the University for their opinion.

With this assurance, I hope the Hon'ble Member will be satisfied and withdraw the cut motion.

Sri R. ANANTARAMAN.—I seek leave to withdraw the cut motion, Sir.

The cut motion was, by leave, withdrawn.

First Grade College at Shimoga.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—"'37 ವಿದ್ಯಾಭ್ಯಾಸ' ಎಂಬ ಬಾಬಿನಲ್ಲಿ ಕೋರಿರತಕ 3,77,90,000 ರೂಪಾಯಿಗಳ 'ಡಿಮ್ಯಾಂಡ್' ಮನವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಮೆಮಾಡಬೇಕು (ಮರೆನಾಡಿನ ಅಭಿವೃದ್ಧಿಗಾಗಿ, ಒಂದು ವಿಶೇಷ ಸಂದರ್ಭವಾಗಿ, ಮುಂದಿನ ಸಾಲಿನ ಬಡ್ಜೆಟ್‌ನಲ್ಲಿ ಪ್ರತ್ಯೇಕವಾಗಿ ಹಣವನ್ನೊದಗಿಸುವುದರ ಮೂಲಕ ಶಿವಮೊಗ್ಗಿಯಲ್ಲಿ ಒಂದು ಮೊದಲನೆಯ ದರ್ಜೆಯ ಕಾಲೇಜನ್ನು ಏರ್ಪಡಿಸಿಕೊಡಬೇಕೆಂಬುದಾಗಿ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ತಿಳಿವಳಿಕೆಯನ್ನು ಕೊಡುವ ವಿಚಾರದಲ್ಲಿ ಸರ್ಕಾರದವರನ್ನು ಒತ್ತಾಯಪಡಿಸುವುದಕ್ಕಾಗಿ)'' ಈ ಕತ್ತರಿ ನಿರ್ಣಯವನ್ನು ಸಭೆಯ ಮುಂದೆ ಇಡುತ್ತಾ ಇದ್ದೇನೆ.

1927-28ನೇ ಸಾಲಿನಲ್ಲಿ ಬೆಂಗಳೂರು ಮತ್ತು ಮೈಸೂರು ಏನಾ ಶಿವಮೊಗ್ಗದಲ್ಲಿ ಇಂಟರ್‌ಮೀಡಿಯಟ್ ಕಾಲೇಜನ್ನು ಪ್ರಾರಂಭಿಸಲಾಯಿತು. ಕೆಲವು ವರ್ಷಗಳನಂತರ ಅದನ್ನು ಮುಚ್ಚಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿ ಆದಾಗ ಎಂದರೆ 1937-38ನೇ ಸಾಲಿನಲ್ಲಿ ಪುನಃ ಆ ಕಾಲೇಜನ್ನು ಪ್ರಾರಂಭಮಾಡಲಾಯಿತು. ಚಿಕ್ಕಮಗಳೂರು ಮತ್ತು ಚಿತ್ರದುರ್ಗ

(ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.)

ಜಿಲ್ಲೆಗಳ ವಿದ್ಯಾರ್ಥಿಗಳ ಸಂಖ್ಯೆ ಶಿವಮೊಗ್ಗದಲ್ಲಿ ಬಹಳ ಹೆಚ್ಚಾದುದರಿಂದ ಸರ್ಕಾರದವರು ಚಿಕ್ಕಮಗಳೂರು ಮತ್ತು ಚಿತ್ರದುರ್ಗದಲ್ಲಿ ಇಂಟರ್‌ಮೀಡಿಯೆಟ್ ಕಾಲೇಜನ್ನು ತೆರೆಯಲಿಕ್ಕೆ ಪ್ರಾರಂಭಮಾಡಿದರು. ಆ ಸಂದರ್ಭದಲ್ಲೇ ಫಸ್ಟ್‌ಗ್ರೇಡ್ ಕಾಲೇಜು ಕೊಡಬೇಕೆಂದು ಸಾರ್ವಜನಿಕರು ಬಹಳವಾಗಿ ಒತ್ತಾಯ ಮಾಡಿದ್ದಾರೆ. ಶಿವಮೊಗ್ಗ ಜಿಲ್ಲೆ ಇಲ್ಲಗೆ ಬಹಳ ದೂರದಲ್ಲಿದ್ದು ಅಲ್ಲಿನ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿರತಕ್ಕ ವಿಚಾರ. ಅಲ್ಲಿನ ಸಾರ್ವಜನಿಕರು ಫಸ್ಟ್‌ಗ್ರೇಡ್ ಕಾಲೇಜಿನ ವಿದ್ಯಾಭ್ಯಾಸವನ್ನು ಕೊಡಿಸುವುದಕ್ಕೆ ಒಬ್ಬ ವಿದ್ಯಾರ್ಥಿಗೆ ಸುಮಾರು 2,000ದಿಂದ 3,000 ರೂಪಾಯಿಗಳವರೆಗೂ ತೆಗೆದಿಡಬೇಕಾದ ಸಂದರ್ಭ ಒದಗಿ ಬಂದಿದೆ. ಸರ್ಕಾರದವರು ಈ ವಿಷಯವನ್ನು ಪರಿಶೀಲನೆ ಮಾಡಬೇಕೆಂದು ಒಂದು ಸಮಿತಿಯನ್ನು ಕೂಡ ನೇಮಕಮಾಡಿದ್ದೇವೆ ಎಂದು ಈ ಹಿಂದೆ ಹೇಳಿದ್ದಾರೆ. ಕಾರಣಾಂತರಗಳಿಂದ ಆ ಸಮಿತಿಯವರು ಈ ವಿಷಯಗಳನ್ನೆಲ್ಲಾ ಪರಿಶೀಲನೆಮಾಡಿದರೋ ಇಲ್ಲವೋ ಎಂಬುದು ಅನುಮಾನಾಸ್ಪದವಾಗಿದೆ. ಇದೇ ಸಂದರ್ಭದಲ್ಲೇ ನಮಗೂ ಕಾಲೇಜುಕೊಡಿ ಎಂದು ಹೇಳಿ ಇತರ ಜಿಲ್ಲೆಯವರೂ ಒತ್ತಾಯಮಾಡುತ್ತಾ ಇದ್ದಾರೆ ಎಂದು ನನಗೆ ಗೊತ್ತಾಗಿದೆ. ಚಿತ್ರದುರ್ಗ ಜಿಲ್ಲೆ ತುಮಕೂರಿಗೆ ಬಹಳ ಹತ್ತಿರದಲ್ಲಿದೆ. ಹಾಸನಕ್ಕೆ ಮೈಸೂರು ಬಹಳ ಹತ್ತಿರದಲ್ಲಿದೆ. ಈ ರೀತಿ ಇರುವುದರಿಂದಲೂ ಮತ್ತು ಶಿವಮೊಗ್ಗ ಮಲೆನಾಡಿನಲ್ಲಿ ಮುಖ್ಯ ಪಟ್ಟಣವಾಗಿರುವುದರಿಂದಲೂ ಇಲ್ಲಿಗೆ ಕಾಲೇಜು ಕೊಡುವುದು ಒಳ್ಳೆಯದೇ ಒಳ್ಳೆಯದಲ್ಲವೇ ಎಂಬುದನ್ನು ಸಮಿತಿಯವರು ಪರಿಶೀಲನೆಮಾಡದೇ ಬಿಟ್ಟುಬಿಟ್ಟಿರುವುದರಿಂದ ಶಿವಮೊಗ್ಗವೇ ಸರಿಯಾದ ಸ್ಥಳ ಎಂದು ಸರ್ಕಾರದವರು ವಿಶ್ವವಿದ್ಯಾನಿಲಯದವರಿಗೆ ಹೇಳಿ, ಇದನ್ನು ನಮಗೆ ಒದಗಿಸುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಈಗ ಎಲ್ಲಾ ಜಿಲ್ಲೆಗಳಿಗೂ ಕೊಡಬೇಕೇ ಬೇಡವೇ ಎಂಬುದನ್ನು ಪರಿಶೀಲನೆ ಮಾಡಬೇಕಾದ ಅವಶ್ಯಕತೆ ಇಲ್ಲ. 600-800 ಜನ ವಿದ್ಯಾರ್ಥಿಗಳು ವಿದ್ಯಾಭ್ಯಾಸ ನಡೆಸುತ್ತಾ ಇರುವ ಈ ಪ್ರದೇಶದಲ್ಲಿ 200ರಿಂದ 300 ಜನ ವಿದ್ಯಾರ್ಥಿಗಳು ಮಾತ್ರ ತುಮಕೂರು, ಬೆಂಗಳೂರು, ಮೈಸೂರು ಪಟ್ಟಣಗಳಿಗೆ ಬಂದು ವಿದ್ಯಾಭ್ಯಾಸವನ್ನು ಮುಂದುವರಿಸುತ್ತಾ ಇದ್ದಾರೆ. ಇತರರು ಹೆಚ್ಚಿನ ವಿದ್ಯಾಭ್ಯಾಸ ಪಡೆಯುವುದಕ್ಕೆ ಆಗದೆ ಕಾಲೇಜು ಬಿಟ್ಟು ಬಿಟ್ಟು ಅವರವರ ಮನೆಗಳಲ್ಲೇ ಇರುತ್ತಾರೆ. ನಮ್ಮ ಜಿಲ್ಲೆಯಲ್ಲಿ ವ್ಯವಸಾಯವೇ ಬಹಳ ಮುಖ್ಯವಾದ ಕಸಬಾಗಿದೆ. ಬೆಂಗಳೂರು, ಮೈಸೂರು, ದಾವಣಗೆರೆಗಳಲ್ಲಿರುವಂತೆ ಯಥೇಚ್ಛವಾಗಿ ಹಣ ಸಂಪಾದನೆಮಾಡಿ ಲಕ್ಷಾಂತರ ರೂಪಾಯಿ ಇಟ್ಟುಕೊಂಡಿರುವಂಥ ಘನವಾದ ಶ್ರೀಮಂತರು ಅಲ್ಲಿ ಅಪ್ಪೇನೂ ಇಲ್ಲ ಎಂದು ಹೇಳುತ್ತೇನೆ. ಸರ್ಕಾರದವರಿಗೆ ಸುಮಾರು 10 ವರ್ಷಗಳ ಕಾಲ ನಮ್ಮ ಜಿಲ್ಲೆಯವರು 5 ಲಕ್ಷದಿಂದ 8 ಲಕ್ಷ ಪಲ್ಲ ಗಳವರೆಗೂ ಪ್ರತಿವರ್ಷ ಭತ್ತವನ್ನು ಕೊಟ್ಟುದರ ಪರಿಣಾಮವಾಗಿ - ದೇಶಾದ್ಯಂತ ಅದನ್ನು ಅನೇಕ ಜನರಿಗೆ ಒದಗಿಸಿ ಸಹಾಯಮಾಡಿದ್ದಾರೆ ಎಂದು ಹೇಳಿದರೆ ಅದೇನೂ ಅತಿಶಯೋಕ್ತಿಯಾಗಲಾರದು ಎಂದು ತಿಳಿದುಕೊಂಡಿದ್ದೇನೆ. ಈ ಕಾರಣದಿಂದಲೂ ಸಹ ಫಸ್ಟ್‌ಗ್ರೇಡ್ ಕಾಲೇಜು ಕೊಡಬೇಕೆಂದು ಹೇಳಿ ಮತ್ತೊಮ್ಮೆ ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಭತ್ತವನ್ನು ಕಂಚ್ರೋರ್ ಬೆರೆಯಲ್ಲಿ 14 ರೂಪಾಯಿನಿಂದ 19 ರೂಪಾಯಿವರೆಗೂ ಕೊಟ್ಟರು ಸರ್ಕಾರದವರು ನಮ್ಮಲ್ಲಿದ್ದ ಆಹಾರ ಸಾಮಗ್ರಿಯನ್ನು ಒತ್ತಾಯ ಪೂರ್ವಕವಾಗಿ ತೆಗೆದುಕೊಂಡರು. ಅದೇ ಸಾಮಗ್ರಿಯನ್ನು ಅವರು ಹೊರಗಡೆ ಮಾರಾಟಮಾಡಿಕೊಂಡಿದ್ದರೆ 35 ರೂಪಾಯಿಗಳಿಂದ 40 ರೂಪಾಯಿಗಳವರೆಗೂ ಪಡೆಯುತ್ತಾ ಇದ್ದರು ಎಂದು ಹೇಳುತ್ತೇನೆ. ಬ್ಲಾಕ್ ಮಾರ್ಕೆಟ್ಟನ್ನು ನಮ್ಮ ಜಿಲ್ಲೆಯಲ್ಲಿ ಮಾಡಿಲ್ಲ ಎಂದು ಖಡಾ ಖಂಡಿತವಾಗಿ ಹೇಳಬಲ್ಲೆ. ಸರ್ಕಾರಕ್ಕೆ ರೆವೆನ್ಯೂ ಇನ್‌ಸ್ಪೆಕ್ಟರು ಕೇಳದೇ ಆಹಾರ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಿ ಡಿಪೋಗಳಲ್ಲಿ ಕೊಟ್ಟಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ಜಿಲ್ಲೆಯಲ್ಲಿ ಬ್ಲಾಕ್ ಮಾರ್ಕೆಟ್ ಮಾಡಿದ್ದಾರೆ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ.

Mr. SPEAKER.—Give some other reasons. Do not make much of that only.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಕಂದಾಯವನ್ನೂ ಕೂಡ ಸರ್ಕಾರದವರಿಗೆ ಕೊಡುತ್ತಾ ಇದ್ದಾರೆ. ಬಾಗಾಯ್ತು, ಜಮೀನು, ತರೀ ಜಮೀನು ಹೆಚ್ಚಾಗಿದೆ. ಬೇರೆಕಡೆ ಕಮರ್ಷಿಯಲ್ ಕ್ರಾಪ್ಸ್ ಬೆಳೆದುಕೊಂಡು ಹೆಚ್ಚಿನ ಹಣ ಸಂಪಾದನೆ ಮಾಡಿಕೊಂಡಿದ್ದಾರೆ ಎಂದರೆ ಅದು ತಪ್ಪಾಗಲಾರದು. ಅಡಿಕೆ ಇದೆ. ಅಡಿಕೆ ಇದ್ದರೂ ಕೂಡ ಅದು ಹೆಚ್ಚಾಗಿ ಬೆಳೆಬಂದು ಹೆಚ್ಚಿನ ಬೆಲೆ ಬಂದಿದೆ ಎಂದು ಹೇಳುವುದ ಕ್ಕಾಗುವುದಿಲ್ಲ. ಬತ್ತದ ಬೆಳೆಯೇ ಬಹಳ ಮುಖ್ಯವಾದದ್ದು. ಮಲೆನಾಡಿನ ಜನರಿಗೆ ವಿದ್ಯಾಭ್ಯಾಸ ಒದಗಿಸುವುದಕ್ಕಾಗಿ ಸರ್ಕಾರದವರು ಬಹಳ ದೊಡ್ಡ ಮನಸ್ಸುಮಾಡಿ ಈ ಸಾಲಿನ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಬೇಕಾಗಿದೆ. ಅಲ್ಲಿನ ಸಾರ್ವಜನಿಕರು ಬಹಳ ವರ್ಷಗಳಿಂದಲೂ ಕೂಡ ಈ ಕಾಲೇಜು ಕೊಡಬೇಕೆಂದು ಕೇಳುತ್ತಾ ಇದ್ದಾರೆ. ಫಸ್ಟ್‌ಗ್ರೇಡ್ ಕಾಲೇಜು ದೊರೆಯುವುದಾದರೆ ಅನೇಕ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಂದುವರಿಸಿ ಅನೇಕ ಹಳ್ಳಿಗಳಿಗೂ ಕೂಡ ಹೋಗಿ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಸಹಾಯಕರಾಗಬಹುದು. ಆದ್ದರಿಂದ ಸರ್ಕಾರದವರು ದೊಡ್ಡ ಮನಸ್ಸುಮಾಡಿ ಫಸ್ಟ್‌ಗ್ರೇಡ್ ಕಾಲೇಜನ್ನು ಮುಂದಿನ ವರ್ಷವೇ ಕೊಡಿಸಿಕೊಡಬೇಕೆಂದು ಒತ್ತಾಯಮಾಡುತ್ತೇನೆ.

Mr. SPEAKER.—Cut motion moved :

"That the demand be reduced by Rs. 100."

ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಈ ಖೋತಾನಿರ್ಣಯವನ್ನು ಪುಷ್ಟೀಕರಿಸುತ್ತೇನೆ. ಫಸ್ಟ್‌ಗ್ರೇಡ್ ಕಾಲೇಜು ಕೊಡುವುದು ಅತ್ಯಾವಶ್ಯಕ ಒಪ್ಪಬೇಕು. ಆದರೆ ಎಲ್ಲ ಕೊಡಬೇಕೆಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕಾಗಿದೆ ಎಂದು ಹೇಳಿ ನಾನು ತಿಳಿಸುತ್ತೇನೆ. ಒಂದು ವಿಚಾರ ಏನೆಂದರೆ ಈಗ ನಮ್ಮಲ್ಲಿಗೆ ಬಳ್ಳಾರಿ ಸೇರಿದೆ ಎಂಬುದನ್ನು ಸರ್ಕಾರದವರು ಮರೆಯ ಕೂಡದು. ಒಂದಾನೊಂದು ಕಾಲದಲ್ಲಿ ಚಿತ್ರದುರ್ಗ ಮೂಲೆಯ ಜಿಲ್ಲೆಯಾಗಿತ್ತು ; ಈಗ ಮಧ್ಯ ಪ್ರದೇಶದಲ್ಲಿರತಕ್ಕ ಜಿಲ್ಲೆಯಾಗಿ ಎಲ್ಲರಿಗೂ ಬೇಕಾಗಿದೆ. ಇಲ್ಲಿಂದ ತುಮಕೂರಿಗೆ 85 ಮೈಲು ದೂರವಿದೆ. ಅಲ್ಲ ಒಂದು ಫಸ್ಟ್‌ಗ್ರೇಡ್ ಕಾಲೇಜನ್ನು ಕೊಟ್ಟಿದ್ದೀರಿ. ಶಿವಮೊಗ್ಗ ಮತ್ತು ಚಿಕ್ಕಮಗಳೂರಿನಿಂದ ತುಮಕೂರಿಗೆ 60 ಮೈಲು ಆಗುತ್ತದೆ. ಆ ಪ್ರದೇಶದವರು ತುಮಕೂರಿಗೆ ಸುಖವಾಗಿ ಹೋಗಬಹುದು ; ಬೇಕಾದ

ಅನುಕೂಲ ಸರ್ಕಾರದವರು ಮಾಡಿಕೊಡುತ್ತಾರೆ ಎಂದು ಹೇಳಲು ಅಪೇಕ್ಷೆ ಪಡುತ್ತೇನೆ. ಅಷ್ಟೇಅಲ್ಲದೆ ಜನಸಂಖ್ಯೆ ತೆಗೆದುಕೊಳ್ಳೋಣ. ಶಿವಮೊಗ್ಗಾದ ಜನ ಸಂಖ್ಯೆ 4½ಲಕ್ಷ, ನಮ್ಮ ಜಿಲ್ಲೆಯಲ್ಲಿ 7, 8 ಲಕ್ಷದವರೆಗೂ ಜನಸಂಖ್ಯೆ ಇದೆ. ಸರ್ಕಾರದವರೊಡನೆ ನಾವು ಯಾವ ರೀತಿ ಸಹಕರಿಸಿದ್ದೇವೆ, ಅವರು ಯಾವ ರೀತಿ ಸಹಕರಿಸಿದ್ದಾರೆ ಎಂಬುದು ಯೋಚನಮಾಡಬೇಕಾದ ವಿಷಯ. ನಾವು ಇಂಟರ್‌ಮೀಡಿಯಟ್ ಕಾಲೇಜು ಕಟ್ಟಡವನ್ನು ಕಟ್ಟಲಿಕ್ಕೆ ತಕ್ಕ ಏರ್ಪಾಡನ್ನು ಮಾಡಿ ಸರ್ಕಾರದವರೊಡನೆ ಸಹಕರಿಸಿದ್ದೇವೆ. ಅದೂ ಅಲ್ಲದೆ ನಮ್ಮ ಜಿಲ್ಲೆ ಕ್ಷಾಮಕ್ಕೆ ಒಳಗಾಗಿರತಕ್ಕ ಜಿಲ್ಲೆ. ಯಾವ ವಿಧದಲ್ಲಿ ಯೋಚನೆ ಮಾಡಿದರೂ ಕೂಡ ಚಿತ್ರದುರ್ಗಕ್ಕೆ ಫಸ್ಟ್‌ಗ್ರೇಡ್ ಕಾಲೇಜನ್ನು ಕೊಡುವುದು ಅತ್ಯವಶ್ಯಕವಾಗಿದೆ. ಮತ್ತೊಂದು ಅಂಶ ಎಂದರೆ: ನಮ್ಮ ಜಿಲ್ಲೆಗೆ ಮುಖ್ಯ ಮಂತ್ರಿಗಳವರೇ ಬಂದು ನೋಡಿದರು; ಆ ಸಂದರ್ಭದಲ್ಲಿ . . . .

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಖೋತಾ ನಿರ್ಣಯವನ್ನು ಪುಷ್ಟೀಕರಿಸುತ್ತೇನೆಂದು ಪ್ರಾರಂಭದಲ್ಲಿ ಹೇಳಿ ಈಗ ವಿರೋಧಮಾಡುತ್ತ ಇದ್ದಾರೆ.

ಅಧ್ಯಕ್ಷರು.—ನಿಮ್ಮ ಜಿಲ್ಲೆಗೆ ಕೊಡಬೇಡಿ ಎಂದು ಹೇಳದೇ ಇದ್ದರೂ ಚಿತ್ರದುರ್ಗಕ್ಕೆ ಏಕೆ ಕೊಡಕೂಡದು ಎಂಬುದನ್ನು ಹೇಳುತ್ತಾ ಇದ್ದಾರೆ.

ಶ್ರೀ ಜಿ. ಶಿವಪ್ಪ.—ಅಲ್ಲಿರುವ ಲೈಬ್ರೆರಿ, ಎಕ್ವಿಪ್‌ಮೆಂಟ್ ಇವೆಲ್ಲಾ up-to-date ಆಗಿವೆ; ಮತ್ತು ಸಹಕಾರ ಕೂಡ ಇದೆ ಎಂದು ಸಾರ್ವಜನಿಕರು ತಿಳಿಸಿದರು. ಇದನ್ನೆಲ್ಲಾ ಪರಿಶೀಲನೆಮಾಡಿ ನಮ್ಮ ಜಿಲ್ಲೆಗೇ ಒಂದು ಫಸ್ಟ್‌ಗ್ರೇಡ್ ಕಾಲೇಜನ್ನು ಕೊಡಬೇಕೆಂದು ಹೇಳಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಸ್ವಾಮಿ, ಶಿವಮೊಗ್ಗಾಕ್ಕೆ ಒಂದು ಫಸ್ಟ್‌ಗ್ರೇಡ್ ಕಾಲೇಜು ಕೊಡುವ ವಿಚಾರದಲ್ಲಿ ಕಳೆದ ಕೆಲವು ವರ್ಷಗಳಿಂದ ಮನವಿಗಳು ಸರ್ಕಾರಕ್ಕೆ ಬರುತ್ತಾ ಇವೆ ಮತ್ತು ಯೂನಿವರ್ಸಿಟಿ ಅಥಾರಿಟೀಸ್‌ಗೂ ಕೂಡ ಬರುತ್ತಾ ಇವೆ. ಶಿವಮೊಗ್ಗಕ್ಕೆ ಒಂದು ಫಸ್ಟ್‌ಗ್ರೇಡ್ ಕಾಲೇಜು ಕೊಡುವ ಅವಶ್ಯಕತೆಯ ವಿಚಾರದಲ್ಲಿ ಸರ್ಕಾರದವರಿಗೂ ಕೂಡ ಯಾಥೂ ಭಿನ್ನಾಭಿಪ್ರಾಯವಿಲ್ಲ. ಸ್ಥಾಪನೆ ಮಾಡಲಿಕ್ಕೆ ಇರುವ ಅವಶ್ಯಕತೆಯನ್ನು ಅವರೂ ಒಪ್ಪಿ ಕೊಂಡಿದ್ದಾರೆ. ಏನೋ ಕೆಲವು ಕಾರಣಗಳಿಂದ ಅವರು ಅದನ್ನು ಮುಂದಕ್ಕೆ ಹಾಕುತ್ತಾ ಇದ್ದಾರೆ. ಒಂದು ಸಂತೋಷದ ಸಂಗತಿ ಏನೆಂದರೆ, ಕೆಲವು ದಿವಸಗಳ ಹಿಂದೆ ಮಾನ್ಯ ವಿದ್ಯಾಸಚಿವರು ಶಿವಮೊಗ್ಗಾಕ್ಕೆ ಭೇಟಿಕೊಟ್ಟಾಗ ಅಲ್ಲಿನ ಪುರಪ್ರಮುಖರು ಒಂದು ನಿಯೋಗ ಹೋಗಿ ಈ ವಿಷಯವನ್ನು ಅವರ ಗಮನಕ್ಕೆ ತಂದಾಗ ಬಹಳ ಸಹಾನುಭೂತಿಯಿಂದ ಪರಿಶೀಲಿಸಿ ಈ ವರ್ಷ ಎಂದರೆ 1954—55ನೆಯ ಸಾಲಿನಲ್ಲೇ ಒಂದು ಫಸ್ಟ್‌ಗ್ರೇಡ್ ಕಾಲೇಜನ್ನು ಕೊಡುವುದಕ್ಕೆ ಪ್ರಯತ್ನಮಾಡುತ್ತೇವೆ ಎಂದು ಭರವಸೆ ಕೊಟ್ಟಿದ್ದಾರೆ. ಆ ಭರವಸೆ ಈಡೇರಿಸಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

2 P.M.

* ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾಶಾಖೆಯ ಮಂತ್ರಿಗಳು).—ಸ್ವಾಮಿ, ಫಸ್ಟ್ ಗ್ರೇಡ್ ಕಾಲೇಜಿನ ಆವಶ್ಯಕತೆ ಶಿವಮೊಗ್ಗೆಯಲ್ಲಿ ಇದೆಯೆಂದು ನಾನು ಮನಗಂಡಿದ್ದೇನೆ. ಆದರೆ ಈಗ ಫಸ್ಟ್‌ಗ್ರೇಡ್ ಕಾಲೇಜ್ ಬೇಕೆಂದು ಬಹಳ ಕಡೆ ಕೇಳುತ್ತಿದ್ದಾರೆ. ಹೀಗೆ ಕೇಳುವವರು ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಹಾಸನ ಜಿಲ್ಲೆಗಳವರು; ಉತ್ತರ ಪ್ರದೇಶದಲ್ಲಿ ಇಷ್ಟೂಕಡೆ ಈ ರೀತಿ ಕೇಳುತ್ತಿರುವುದು ನನಗೆ ಕಾಣಬರುತ್ತಿದೆ. ಎಷ್ಟು ವಿದ್ಯಾರ್ಥಿಗಳಿಗೆ ಈ ಸೌಕರ್ಯವಾದರೆ ಅಷ್ಟೂ ನಮಗೆ ಸಂತೋಷ. ಆದರೆ ಎಷ್ಟು ಸಾಧ್ಯವೆಂಬುದನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕು. ನಾನು ಶಿವಮೊಗ್ಗಕ್ಕೆ ಹೋದಾಗ ಸಾರ್ವಜನಿಕರ ಬೆಂಬಲ ಎಷ್ಟು ಹೆಚ್ಚಾಗಿ ಸಿಕ್ಕಿದರೆ ಅಷ್ಟು ಹೆಚ್ಚಾಗಿ ಮಾಡಲು ಸಾಧ್ಯವಿದೆ, ಒಂದು ವೇಳೆ ಸೈನ್ಸ್‌ಗ್ರೂಪ್ ಮಾಡುವುದಕ್ಕೆ ಹೆಚ್ಚು ಖರ್ಚಾಗುವುದರಿಂದ ಆರ್ಟ್ಸ್ ಸೆಕ್ಷನ್ ಪ್ರಾರಂಭಿಸಿ ಮುಂದುವರಿಸುವುದು ನೂಕ್ತವೆಂದು ನಲಹೆ ಕೊಜ್ಜೆ. ಆ ನಲಹೆಯನ್ನು ಅವರೂ ಕೂಡ ಪೂರ್ಣವಾಗಿ ಒಪ್ಪಿ ಪುರಸ್ಕಾರ ಕೊಟ್ಟರೆ ನಾವು ಕೂಡ ಆದಷ್ಟು ಪ್ರಯತ್ನಮಾಡಿ ಯೂನಿವರ್ಸಿಟಿಗೆ ನಲಹೆಕೊಡುವುದಕ್ಕೆ ಅವಕಾಶವಾಗುತ್ತದೆ. ಇದನ್ನೇ ವಿಧಾನಪರಿಷತ್ತಿನಲ್ಲೂ ಕೂಡ ಒಂದು ಸಂದರ್ಭದಲ್ಲಿ ನಾನು ಹೇಳಿದೆ. ಆದ್ದರಿಂದ ಇದನ್ನು ಎಲ್ಲಿ ಸ್ಥಾಪನೆಮಾಡಬೇಕು, ಯೂನಿವರ್ಸಿಟಿ ಎಷ್ಟು ಸಹಾಯ ನೀಡುವುದಕ್ಕೆ ಸಾಧ್ಯವಿದೆ, ಸರ್ಕಾರದವರು ಎಷ್ಟು ಭಾಗವಹಿಸಬೇಕು ಎಂಬುದನ್ನು ಯೂನಿವರ್ಸಿಟಿ ನಮಿತಿಯವರು ತೀರ್ಮಾನ ಮಾಡುವುದು ನೂಕ್ತ ಎಂದು ಅವರಿಗೆ ವಹಿಸಿದೆ. ಅವರು ಪರಿಶೀಲಿಸುತ್ತಿದ್ದಾರೆ. ಸರ್ಕಾರದವರು ಎಷ್ಟು ಕಷ್ಟವಾದರೂ ಕೂಡ ಈ ವಿಷಯವನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತಾರೆಂದು ಹೇಳಬಲ್ಲೆ. ಇಷ್ಟು ಆಶ್ವಾಸನೆ ಕೊಟ್ಟಮೇಲೆ ಮಾನ್ಯಸೂಚಕರು ತಮ್ಮ ಖೋತಾ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ನನ್ನ ಖೋತಾ ಸೂಚನೆಯನ್ನು ವಾಪಸು ತೆಗೆದುಕೊಳ್ಳಲು ಅನುಮತಿಬೇಡುತ್ತೇನೆ.

The cut motion was, by leave, withdrawn.

Mr. SPEAKER.—The next four cut motions stand in the name of Sri G. Sivappa. He can move one of them.

Sri G. SIVAPPA (Holalkere).—I move serial No. 12. I want to speak in Hindi.

Mr. SPEAKER.—No. It will be of no good because it cannot be recorded. For the time being you can speak either in English or Kannada. My difficulty is, the Hon'ble Member may say something which I cannot understand and other Hon'ble Members may raise points of order.

(*Laughter*).

Need for spreading Hindi in Educational Institutions.

Sri G. SIVAPPA.—I beg to move:

"That the demand under the head '37. Education' for